ಅಲ್ಲಿನ ಜೀವನ ವಿಧಾನವನ್ನು ನಿರಾಕರಿಸುವ ಅಂಬೇಡ್ಕರ್ ಅವರದ್ದು ಮತ್ತೊಂದು ಅತಿರೇಕದ ನಿಲುವು ಎಂದು ನನಗನ್ನಿಸುತ್ತದೆ. ವಾಸ್ತವವಾಗಿ, ಎಲ್ಲ ಜಾತಿಗಳಲ್ಲೂ ಆಯಾ ಜಾತಿಯ ಬಡವರನ್ನು ಅಸ್ಪೃಶ್ಯರಂತೆಯೇ ಕಾಣಲಾಗುತ್ತಿದೆ. ನನಗನ್ನಿಸುವುದು, ಮೊದಲು ಎಲ್ಲ ಸಮುದಾಯಗಳ ನಡುವೆ ಆರ್ಥಿಕ ಸಮಾನತೆ ಬರಬೇಕು. ಅದು ಮೊದಲ ಹೆಜ್ಜೆ. ಸಾಮಾಜಿಕ ಸಮಾನತೆ ನಂತರದ ಹೆಜ್ಜೆ.

◆ **ಇನ್ನು ವಿಮರ್ಶೆಯ ಬಗ್ಗೆ... ಅಕಡೆಮಿಕ್ ವಲಯಕ್ಕೆ ಸೇರದ ಲೇಖಕರನ್ನು ಕನ್ನಡ ವಿಮರ್ಶಾ ಲೋಕ ಕಡೆಗಣಿಸಿದೆ ಎಂದು ಆರಂಭದಿಂದಲೂ ಹೇಳುತ್ತಲೇ ಬಂದವರು ನೀವು. ನಿಮಗೆ ಹಾಗನ್ನಿಸೋದಕ್ಕೆ ಕಾರಣವೇನು?**

ಮೊದಲನೆಯದಾಗಿ, ಒಬ್ಬ ನಿಜವಾದ ವಿಮರ್ಶಕ ತನ್ನ ಕಾಲದ ಎಲ್ಲ ಲೇಖಕರನ್ನೂ ಓದಬೇಕು. ಆದರೆ ನಮ್ಮ ಕನ್ನಡದ ಬಹುತೇಕ ವಿಮರ್ಶಕರು ಎಲ್ಲರನ್ನೂ, ಎಲ್ಲವನ್ನೂ ಓದುವುದೇ ಇಲ್ಲ. ಕೆಲವರನ್ನಷ್ಟೇ ಇಟ್ಟುಕೊಂಡು ಅವರು ವಿಮರ್ಶೆ ಮಾಡುತ್ತಿರುತ್ತಾರೆ. ಅಕಡೆಮಿಕ್ ವಲಯದ ಆಚೆಗೆ ಸೃಷ್ಟಿಯಾಗುತ್ತಿರುವ ಸಾಹಿತ್ಯವನ್ನು, ಹೊಸ ಬರಹಗಾರರನ್ನು ಅವರು ಗಂಭೀರವಾಗಿ ಪರಿಗಣಿಸುವುದಿಲ್ಲ. ವಿಮರ್ಶೆ ಎನ್ನುವುದು ಕೆಲವೇ ಕೆಲವು ಲೇಖಕರಿಗೆ ಮಾತ್ರ ಸೀಮಿತವಾಗಿಬಿಟ್ಟಿದೆ. ಅಕಡೆಮಿಕ್ ವಲಯದವರು

**ಬೆಳಚಿಕ್ಕನಹಳ್ಳಿ ಶ್ರೀನಾಥ**

ದಶಕಕ್ಕೂ ಹೆಚ್ಚು ಕಾಲದಿಂದ ಮುದ್ರಣ ಮತ್ತು ಟೀವಿ ಪತ್ರಕರ್ತರಾಗಿ ಕೆಲಸ ಮಾಡಿ ಅನುಭವವಿರುವ ಶ್ರೀನಾಥ್ ಸಾಹಿತ್ಯ ಮತ್ತು ಪತ್ರಿಕೋದ್ಯಮದ ವಿದ್ಯಾರ್ಥಿ. ಜೊತೆಗೆ ಸಿನಿಮಾದ ಅಪ್ಪಟ ವ್ಯಾಮೋಹಿ. ಗೌರಿಬಿದನೂರು ತಾಲ್ಲೂಕಿನ ಬೆಳಚಿಕ್ಕನಹಳ್ಳಿಯ ಅವರು ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಸಿನಿಮಾ ನಟಿ ಮಂಜುಳಾ ಸಿನಿ ಬದುಕಿನ ಚಿತ್ರವನ್ನು ಕೊಡುವ ಪುಸ್ತಕವನ್ನು ಪ್ರಕಟಿಸಿದ್ದಾರೆ.

ಕತೆಗಾರ ಕೇಶವರೆಡ್ಡಿ ಹಂದ್ರಾಳ ಅವರನ್ನು ಸಂದರ್ಶಿಸುತ್ತಿರುವ ಬೆಳಚಿಕ್ಕನಹಳ್ಳಿ ಶ್ರೀನಾಥ

